ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

# ಕರಳಕಟ್ಟೆ ಗ್ರಾಮಸ್ಥರಿಗೆ ಆಸರೆಯಾದ ಜಲಜೀವನ್ ಮಿಷನ್



ನೀರು ಒಂದು ಅಮೂಲ್ಯವಾದ ಸಂಪತ್ತು. ಭೂವಿಯ ಮೇಲಿನ ಪ್ರತಿಯೊಬ್ಬ ಜೀವಿಗೂ ನೀರು ಬೇಕೇ ಬೇಕು. ಅದ್ರಲ್ಲೂ ಬದಲಾದ ಕಾಲಘಟ್ಟ , ಆಧುನೀಕರಣ, ನಗರೀಕರಣದ ಪರಿಣಾಮ ಪ್ರಸ್ತುತ ದಿನಗಳಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗುತ್ತಿದೆ. ಅದಾಗ್ಯೂ ಮಾನವನ ಮೂಲಭೂತ ಅವಶ್ಯಕತೆಯಾದ ಶುದ್ಧ ನೀರು ಪ್ರತಿಯೊಬ್ಬರಿಗೂ ಅಗತ್ಯ ಪ್ರಮಾಣದಲ್ಲಿ ದೊರಕುವಂತಾಗಲು ಸರ್ಕಾರವು ಶ್ರಮಿಸುತ್ತಿದೆ. ಜಲಜೀವನ್ ಮಿಷನ್ ಯೋಜನೆಯ ಮೂಲಕ ಗ್ರಾಮೀಣ ಭಾಗದ ಪ್ರತಿಯೊಂದು ಮನೆಗೂ ಗೃಹ ನಳ ಸಂಪರ್ಕ ಕಲ್ಪಿಸುವ ಮಹತ್ತರ ಕೆಲಸವಾಗುತ್ತಿದೆ. ಇದೇ ಹಾದಿಯಲ್ಲಿ ಚಾಮರಾಜನಗರ ಜಿಲ್ಲೆಯ ಕರಳಕಟ್ಟೆ ಗ್ರಾಮಕ್ಕೂ ಕಾರ್ಯಾತ್ಮಕ ಗೃಹ ನಳ ಸಂಪರ್ಕ ದೊರೆತು ಗ್ರಾಮದ ಚಿತ್ರಣವೇ ಬದಲಾಗಿದೆ.

## ಕರಳಕಟ್ಟೆ ಗ್ರಾಮಕ್ಕೆ ಗೃಹನಳ ಸಂಪರ್ಕ

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ತಿಮ್ಮರಾಜಿಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಳಕಟ್ಟೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ಸುಮಾರು 12 ಕಿ.ಮೀ ಅಂತರದಲ್ಲಿದೆ. ಈ ಗ್ರಾಮದಲ್ಲಿ ಸೋಲಿಗ ಜನಾಂಗದವರು ವಾಸಿಸುತ್ತಿದ್ದು ಜಡೇಸ್ವಾಮಿ ಕೊಂಡೋತ್ಸವ, ಸಂಕ್ರಾಂತಿ ಹಬ್ಬವನ್ನು ಬಹಳ ವರ್ಷಗಳಿಂದ ಆಚರಿಸಿಕೊಂಡು ಬರುತ್ತಿದ್ದಾರೆ. ಜೀವನ ನಿರ್ವಹಣೆಗಾಗಿ ವ್ಯವಸಾಯ ಮತ್ತು ಕೂಲಿ ಕೆಲಸವನ್ನು ಅವಲಂಬಿಸಿದ್ದಾರೆ.

ಕರಳಕಟ್ಟೆ ಗ್ರಾಮದಲ್ಲಿ ಸುಮಾರು 400 ಜನರು ವಾಸವಿದ್ದಾರೆ. ಇದೊಂದು ಕಾಡಂಚಿನ ಗ್ರಾಮವಾಗಿದ್ದು , ಕೆಂಪಯ್ಯನ ಪಾಳ್ಯ, ಆಣೆಕೆರೆ, ಗುಂಡಲ ಡ್ಯಾಂ ಹಿನ್ನೀರಿಂದ ಸುತ್ತುವರೆದಿದೆ. ಈ ಗ್ರಾಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಿಲ್ಲದೆ, ಗ್ರಾಮದ ಜನರು ಸರಿಸುಮಾರು 2 ಕಿಲೋ ಮೀಟರ್ ದೂರದಲ್ಲಿರುವ ಐತಿಹಾಸಿಕ ಕುರುಬನಕಟ್ಟೆ ಮಂಟೇಸ್ವಾಮಿ ದೇವಸ್ಥಾನದ ಬಳಿಯಿರುವ ಕೆರೆಯಿಂದ ನೀರನ್ನು ಹೊತ್ತು ತರಬೇಕಿತ್ತು.

ಕೆರೆಯಿಂದ ಕುಡಿಯುವ ನೀರು ಹೊತ್ತು ಬರುವಾಗ ದಾರಿಯಲ್ಲಿ ಕಾಡುಪ್ರಾಣಿಗಳು ಅಡ್ಡ ಬಂದು ತೊಂದರೆಯಾಗುತ್ತಿತ್ತು. ಜೀವಹಾನಿಯಾದ ಘಟನೆಗಳೂ ನಡೆದಿವೆ. ಹೀಗಾಗಿ ಕರಳಕಟ್ಟೆ ಗ್ರಾಮಸ್ಥರು ಜೀವ ಕೈಯಲ್ಲಿ ಹಿಡಿದು ನೀರನ್ನು ತರುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಬಳಿಕ ಕೈಪಂಪ್ ಗಳ ಮೂಲಕ ನೀರನ್ನು ಒದಗಿಸಲಾಗುತ್ತಿತ್ತು. ಬೇಸಿಗೆ ಸಮಯದಲ್ಲಿ ಅಂತರ್ಜಲ ಮಟ್ಟ ಕಡಿಮೆಯಾಗಿ ಅಲ್ಲಿದ್ದ ನೀರು ಸಹ ಬತ್ತಿಹೋಯಿತು. ನಂತರದ ವರ್ಷಗಳಲ್ಲಿ ಕೊಳವೆ ಬಾವಿ ನೀರನ್ನು ತೊಂಬೆಗಳ ಮೂಲಕ ಕರಳಕಟ್ಟೆ ಗ್ರಾಮದ ಜನರಿಗೆ ಒದಗಿಸಲಾಗುತ್ತಿತ್ತು. ಮಳೆಗಾಲದಲ್ಲಿ ವಿದ್ಯುತ್ ವ್ಯತ್ಯಯದಿಂದ ವಾರಗಟ್ಟಲೆ ಕುಡಿಯುವ ನೀರಿಲ್ಲದೆ ಕೆರೆಯ ನೀರನ್ನು ದಿನನಿತ್ಯ ಕುಡಿಯಲು, ಅಡುಗೆ ಮಾಡಲು ಜನರು ಬಳಕೆ ಮಾಡುತ್ತಿದ್ದರು.

## ಗ್ರಾಮದ ಚಿತ್ರಣ ಬದಲಿಸಿದ ಬಹು ಗ್ರಾಮ ಕುಡಿಯುವ ನೀರು ಯೋಜನೆ

ಆದ್ರೆ ಇದೀಗ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಜಲಜೀವನ್ ಮಿಷನ್ ಯೋಜನೆಯಡಿ ಕರಳಕಟ್ಟೆ ಗ್ರಾಮಕ್ಕೆ ಶುದ್ಧ ಕುಡಿಯುವ ನೀರನ್ನು ಒದಗಿಸುತ್ತಿದೆ.

**ಬಹು ಗ್ರಾಮ ಕುಡಿಯುವ ನೀರು ಯೋಜನೆಯ ಯಶಸ್ವಿ ಅನುಷ್ಠಾನದ ಮೂಲಕ ಹೆಚ್.ಡಿ.ಪಿ.ಇ ಪೈಪ್ ಅಳವಡಿಸಿ ಗ್ರಾಮದ 81 ಮನೆಗಳಿಗೆ ಕಾರ್ಯತ್ಮಕ ನಳ ಸಂಪರ್ಕ ಕಲ್ಪಿಸಿ, ಮನೆಯ ಮುಂಭಾಗದಲ್ಲಿ ಶುದ್ಧ ಮತ್ತು ಸುರಕ್ಷಿತವಾದ ಕುಡಿಯುವ ನೀರು ದೊರಕುವಂತೆ ಮಾಡಲಾಗಿದೆ.**

ಸದ್ಯ ಗ್ರಾಮಸ್ಥರಿಗೆ ದಿನದ ***24 ಗಂಟೆಯೂ*** ಅಗತ್ಯ ಪ್ರಮಾಣದಲ್ಲಿ ಶುದ್ಧ ಮತ್ತು ಸುರಕ್ಷಿತವಾದ ಕುಡಿಯುವ ನೀರುಲಭ್ಯವಾಗುತ್ತಿದೆ. ಇದ್ದರಿಂದ ಜನರ ಜೀವನ ಹಾಗೂ ಆರೋಗ್ಯ ಮಟ್ಟವು ಸುಧಾರಿಸಿದ್ದು ಗ್ರಾಮಸ್ಥರು ಸಂತಸಗೊಂಡಿದ್ದಾರೆ.



8277506000
ಏಕೀಕೃತ ಸಹಾಯವಾಣಿ